**All India Radio: Bangalore**
**National Bulletin In Kannada**
**28.07.2025  07.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

- ಸಂಸತ್ತಿನಲ್ಲಿಂದು ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು 'ಆಪರೇಷನ್ ಸಿಂದೂರ್' ಕುರಿತು ವಿಶೇಷ ಚರ್ಚೆ ಆರಂಭ
- ದೇಶದ ಸಾರ್ವಭೌಮತೆಗೆ ಎದುರಾಗುವ ಬೆದರಿಕೆಗೆ ಆಪರೇಷನ್ ಸಿಂದೂರ್‌ನಿಂದ ತಕ್ಕ ಉತ್ತರ ನೀಡುವ ಸಂದೇಶ - ಪ್ರಧಾನಿ ನರೇಂದ್ರ ಮೋದಿ
- ಥೈಲ್ಯಾಂಡ್-ಕಾಂಬೋಡಿಯಾ ಗಡಿ ಸಂಘರ್ಷ ಪರಿಹಾರಕ್ಕೆ ಇಂದು ಉಭಯ ರಾಷ್ಟ್ರಗಳ ನಾಯಕರ ಮಾತುಕತೆ
- ಆಂಡರ್ಸನ್ ತೆಂಡೂಲ್ಕರ್ ಟ್ರೋಫಿ ; ಭಾರತ-ಇಂಗ್ಲೆಂಡ್ ನಡುವಿನ ೪ನೇ ಟೆಸ್ಟ್ ಕ್ರಿಕೆಟ್ ಪಂದ್ಯ ಡ್ರಾ ನಲ್ಲಿ ಅಂತ್ಯ

<><><><>

ಲೋಕಸಭೆಯಲ್ಲಿಂದು 'ಆಪರೇಷನ್ ಸಿಂಧೂರ್' ಕುರಿತು ಚರ್ಚೆ ಆರಂಭವಾಗುವ ಸಾಧ್ಯತೆ ಇದೆ. ಪಹಲ್ಗಾಂದಲ್ಲಿ ನಡೆದ ಭಯೋತ್ಪಾದಕ ದಾಳಿಯ ಹಾಗೂ ಆಪರೇಷನ್ ಸಿಂದೂರ್ ಕುರಿತು ಚರ್ಚೆ ನಡೆಸಲು ಮುಂಗಾರು ಅಧಿವೇಶನದಲ್ಲಿ ವಿಶೇಷವಾಗಿ ಸಮಯ ಮೀಸಲಿಡಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಈ ಹಿಂದೆ ತಿಳಿಸಿದ್ದರು. ಈ ನಿರ್ಧಾರವನ್ನು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರ ಅಧ್ಯಕ್ಷತೆಯಲ್ಲಿ ನಡೆದ ವ್ಯವಹಾರ ಸಲಹಾ ಸಮಿತಿಯ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆ. ಲೋಕಸಭೆಯಲ್ಲಿ ಈ ಚರ್ಚೆಗೆ ೧೬ ಗಂಟೆಗಳ ಕಾಲಾವಕಾಶ ನೀಡಲಾಗಿದೆ. ರಾಜ್ಯಸಭೆಯಲ್ಲಿ ಈ ಚರ್ಚೆ ನಾಳೆ ನಡೆಯಲಿದ್ದು, ಅದಕ್ಕೂ ೧೬ ಗಂಟೆಗಳ ಕಾಲಾವಕಾಶ ಮೀಸಲಿರಿಸಲಾಗಿದೆ ಎಂದು ಅವರು ತಿಳಿಸಿದರು. 'ಆಪರೇಷನ್ ಸಿಂಧೂರ್' ಕುರಿತು ಚರ್ಚೆ ನಡೆಸುವಂತೆ ವಿಪಕ್ಷಗಳು ಬೇಡಿಕೆ ಇಟ್ಟಿದ್ದರು. ಆದರೆ, ಮೊದಲ ದಿನದಿಂದಲೂ ಸರ್ಕಾರ ಇದಕ್ಕೆ ಸಹಮತ ವ್ಯಕ್ತಪಡಿಸಿತ್ತು.

<><><><>

ಆಪರೇಷನ್ ಸಿಂಧೂರ್ ಭಾರತದ ಸ್ವಾಯತ್ತತೆಯ ಮೇಲೆ ಹಲ್ಲೆ ನಡೆದರೆ ದೇಶ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಜಗತ್ತಿಗೆ ಸ್ಪಷ್ಟವಾಗಿ ತೋರಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಮಿಳುನಾಡಿನ ಗಂಗೈಕೊಂಡ ಚೋಳಪುರಂನಲ್ಲಿ ನಡೆದ ಚೋಳ ದೊರೆ ಮೊದಲನೇ ರಾಜೇಂದ್ರ ಚೋಳರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಆಪರೇಷನ್ ಸಿಂಧೂರ್ ಸೇನಾ ಕಾರ್ಯಾಚರಣೆ ದೇಶಾದ್ಯಂತ ಜನರಲ್ಲಿ ಹೊಸ ಆತ್ಮವಿಶ್ವಾಸವನ್ನು ಮೂಡಿಸಿದೆ. ಭದ್ರತೆ ಮತ್ತು ಸ್ವಾಯತ್ತತೆಯ ವಿರುದ್ಧ ಯಾವುದೇ ಬೆದರಿಕೆಗೆ ಭಾರತ ದೃಢ ಪ್ರತ್ಯುತ್ತರ ನೀಡುತ್ತದೆ ಎಂಬ ಸಂದೇಶವನ್ನು ಆಪರೇಷನ್ ಸಿಂಧೂರ್ ಜಾಗತಿಕ ಮಟ್ಟದಲ್ಲಿ ನೀಡಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಧಾನಿ ಮೋದಿ, ಚೋಳ ಸಾಮ್ರಾಟ ರಾಜರಾಜ ಚೋಳ ಮತ್ತು ಮೊದಲನೇ ರಾಜೇಂದ್ರ ಚೋಳರ ಸ್ಮರಣಾರ್ಥವಾಗಿ ಭವ್ಯ ಪ್ರತಿಮೆಗಳನ್ನು ತಮಿಳುನಾಡಿನಲ್ಲಿ ನಿರ್ಮಿಸಲಾಗುವುದು ಎಂದು ಘೋಷಿಸಿದರು. ಚೋಳ ಸಾಮ್ರಾಜ್ಯವು ಭಾರತದ ಚರಿತ್ರೆಯ ಸುವರ್ಣ ಯುಗವನ್ನು ಪ್ರತಿನಿಧಿಸುತ್ತದೆ. ಅದರಲ್ಲಿ ವಾಸ್ತುಶಿಲ್ಪ, ಆಡಳಿತ, ರಾಜತಾಂತ್ರಿಕತೆ, ವ್ಯಾಪಾರ ಮತ್ತು ಸಾಂಸ್ಕೃತಿಕ ಸಮನ್ವಯ ಪ್ರಮುಖವಾಗಿವೆ. ಚೋಳರು ಶ್ರೀಲಂಕಾ, ಮಾಲ್ದೀವ್ಸ್ ಮತ್ತು ದಕ್ಷಿಣ ಏಷ್ಯಾ ದೇಶಗಳೊಂದಿಗೆ ಬಲವಾದ ರಾಜಕೀಯ ಮತ್ತು ವ್ಯಾಪಾರಿಕ ಸಂಬಂಧಗಳನ್ನು ಸ್ಥಾಪಿಸಿದ್ದರು ಎಂದು ಮೋದಿ ಹೇಳಿದರು.

<><><><>

ವಿದ್ಯುತ್ ಪ್ರವಾಹ ಹರಡುತ್ತಿದೆ ಎಂಬ ವದಂತಿಯ ನಂತರ ಉಂಟಾದ ಅವ್ಯವಸ್ಥೆಯ ನಂತರ ಕಾಲ್ತುಳಿತ ಸಂಭವಿಸಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಪ್ರಮೇಂದ್ರ ಸಿಂಗ್ ದೋಭಾಲ್ ತಿಳಿಸಿದ್ದಾರೆ. ಹರಿದ್ವಾರ ಜಿಲ್ಲಾಡಳಿತದಿಂದ ಬಂದ ಮಾಹಿತಿಯ ಪ್ರಕಾರ, ಮೃತರಲ್ಲಿ ಉತ್ತರ ಪ್ರದೇಶ, ಬಿಹಾರ ಮತ್ತು ಉತ್ತರಾಖಂಡದ ಅಪ್ರಾಪ್ತ ವಯಸ್ಕರು ಮತ್ತು ವೃದ್ಧ ಯಾತ್ರಿಕರು ಸೇರಿದ್ದಾರೆ. ಶ್ರಾವಣ ಮಾಸದಲ್ಲಿ ಸಾವಿರಾರು ಭಕ್ತರು ಪವಿತ್ರ ಸ್ಥಳದಲ್ಲಿ ನೆರೆದಿದ್ದರಿಂದ ದೇವಾಲಯದ ಆವರಣದಲ್ಲಿ ಜನದಟ್ಟಣೆ ಹೆಚ್ಚಾಗಿ ಈ ಘಟನೆ ಸಂಭವಿಸಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಘಟನೆಯ ಬಗ್ಗೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ ಮತ್ತು ಗಾಯಾಳುಗಳಿಗೆ ಶೀಘ್ರ ಚೇತರಿಕೆ ಸಿಗಲಿ ಎಂದು ಹಾರೈಸಿದ್ದಾರೆ.

ಘಟನೆಯ ಬಗ್ಗೆ ಮ್ಯಾಜಿಸ್ಟೀರಿಯಲ್ ತನಿಖೆಗೆ ಮುಖ್ಯಮಂತ್ರಿ ಧಾಮಿ ಆದೇಶಿಸಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಈ ಮಧ್ಯೆ, ರಾಜ್ಯ ಸರ್ಕಾರವು ಮೃತರ ಸಂಬಂಧಿಕರಿಗೆ ತಲಾ ೨ ಲಕ್ಷ ಮತ್ತು ಗಾಯಗೊಂಡವರಿಗೆ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದೆ.

<><><><>

ಹೊಸ ಅಧ್ಯಯನದ ಪ್ರಕಾರ, ಕೋವಿಡ್ ಲಸಿಕೆಗಳು, ಕೋವಿಡ್-೧೯ಕ್ಕೆ ಕಾರಣವಾದ **SARS-CoV-2** ವೈರಸ್‌ನಿಂದ ಸಂಭವಿಸಬಹುದಾಗಿದ್ದ ೨.೫ ದಶಲಕ್ಷಕ್ಕೂ ಅಧಿಕ ಸಾವುಗಳನ್ನು ತಡೆಗಟ್ಟಿವೆ ಎಂದು ತಿಳಿಸಿದೆ. ಇಟಲಿಯ ಕ್ಯಾಥೋಲಿಕ್ ವಿಶ್ವವಿದ್ಯಾಲಯದ ಸೇಕ್ರೆಡ್ ಹಾರ್ಟ್‌ನ ಸಂಶೋಧಕರ ನೇತೃತ್ವದಲ್ಲಿ, ಪ್ರತಿ ೫ ಸಾವಿರದ ೪೦೦ ಲಸಿಕೆ ಡೋಸ್‌ಗಳಿಂದ ಒಂದು ಕೋವಿಡ್-ಸಂಬಂಧಿತ ಸಾವನ್ನು ತಪ್ಪಿಸಲಾಗಿದೆ ಎಂದು ಅಧ್ಯಯನವು ಕಂಡುಹಿಡಿದಿದೆ. ಪ್ರಾಣಪಾಯದಿಂದ ಉಳಿಸಿದ ಜೀವಗಳಲ್ಲಿ ಶೇಕಡ ೮೨ ರಷ್ಟು, ವೈರಸ್ ಸೋಂಕಿಗೆ ಮುಂಚಿತವಾಗಿ ಲಸಿಕೆ ಹಾಕಿಸಿಕೊಂಡ ಜನರನ್ನು ಒಳಗೊಂಡಿವೆ.

<><><><>

ಥೈಲ್ಯಾಂಡ್ ಮತ್ತು ಕಾಂಬೋಡಿಯಾ ನಾಯಕರು ಗಡಿ ವಿವಾದವನ್ನು ಪರಿಹರಿಸುವ ಉದ್ದೇಶದಿಂದ, ಇಂದು ಮಲೇಷ್ಯಾದಲ್ಲಿ ಮಾತುಕತೆ ನಡೆಸಲಿದ್ದಾರೆ. ಮಧ್ಯಸ್ಥಿಕೆ ಪ್ರಯತ್ನದಲ್ಲಿ ಬ್ಯಾಂಕಾಕ್ ನಿಯೋಗದ ನೇತೃತ್ವವನ್ನು ಥೈಲ್ಯಾಂಡ್ ಹಂಗಾಮಿ ಪ್ರಧಾನಿ ಫುಮ್ಥಮ್ ವೆಚಾಯಾಚೈ ವಹಿಸಲಿದ್ದಾರೆ. ಕಾಂಬೋಡಿಯಾ ಪ್ರಧಾನಿ ಹನ್ ಮಾನೆಟ್ ಕೂಡ ಮಾತುಕತೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ. ಥೈಲ್ಯಾಂಡ್-ಕಾಂಬೋಡಿಯಾ ಗಡಿ ಘರ್ಷಣೆಯಲ್ಲಿ ಸಾವಿನ ಸಂಖ್ಯೆ ३೨ಕ್ಕೆ ಏರಿದ್ದು, ೧३೦ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ನಿನ್ನೆ ನಾಲ್ಕನೇ ದಿನವೂ ಘರ್ಷಣೆಗಳು ಮುಂದುವರಿದರಿಂದ ಕಾಂಬೋಡಿಯನ್ನರು ಥೈಲ್ಯಾಂಡ್ ಗಡಿಯಿಂದ ಸ್ಥಳಾಂತರಗೊಳ್ಳುತ್ತಿದ್ದಾರೆ. ಕಾಂಬೋಡಿಯಾದೊಂದಿಗಿನ ಹೋರಾಟದ ನಡುವೆ ಥೈಲ್ಯಾಂಡ್ ಗಡಿ ಪ್ರದೇಶಗಳಲ್ಲಿ ಸೇನ ಆಢಳಿತವನ್ನು ಘೋಷಿಸಿತ್ತು. ಎರಡೂ ದೇಶಗಳು ತಮ್ಮ ಹಂಚಿಕೆಯ ಗಡಿಯ ವಿವಾದಿತ ಪ್ರದೇಶದಲ್ಲಿ ಗುಂಡಿನ ಚಕಮಕಿ ನಡೆಸಿದ ನಂತರ ಉದ್ವಿಗ್ನತೆ ಹೆಚ್ಚಾಯಿತು, ಇದು ಅಂತಾರಾಷ್ಟ್ರೀಯ ಕಳವಳಕ್ಕೆ ಕಾರಣವಾಯಿತು.

<><><><>

ಪರಸ್ಪರ ಸುಂಕಗಳನ್ನು ವಿಧಿಸುವ ಗಡುವು ಆಗಸ್ಟ್೧ ರಂದು ನಿಗದಿಪಡಿಸಿರುವಂತೆ ಇರಲಿದ್ದು, ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಅಮೆರಿಕ ಆಡಳಿತ ದೃಢಪಡಿಸಿದೆ, ಅದನ್ನು ವಿಸ್ತರಿಸುವ ಯಾವುದೇ ಯೋಜನೆಗಳಿಲ್ಲ ಎಂದು ನಿನ್ನೆ ರಾತ್ರಿ ಮಾಧ್ಯಮಗಳೊಂದಿಗೆ ಮಾತನಾಡಿದ ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಹೇಳಿದ್ದಾರೆ. ಹೆಚ್ಚುವರಿ ಅವಧಿಗಳು ಇರುವುದಿಲ್ಲ ಮತ್ತು ಸುಂಕಗಳು ಆಗಸ್ಟ್ ೧ ರಿಂದ ಜಾರಿಗೆ ಬರುತ್ತವೆ ಎಂದು ಅವರು ದೃಢಪಡಿಸಿದರು. ಇಲ್ಲಿಯವರೆಗೆ, ಐರೋಪ್ಯ ಒಕ್ಕೂಟ, ಬ್ರಿಟನ್, ವಿಯೆಟ್ನಾಂ, ಇಂಡೋನೇಷ್ಯಾ, ಫಿಲಿಪೈನ್ಸ್ ಮತ್ತು ಜಪಾನ್ ಮುಂದಿನ ವಾರದ ಗಡುವಿಗೆ ಮುಂಚಿತವಾಗಿ ಟ್ರಂಪ್ ಆಡಳಿತದೊಂದಿಗೆ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿವೆ.

<><><>

ಐರೋಪ್ಯ ಒಕ್ಕೂಟದಿಂದ ಅಮೆರಿಕಗೆ ಪ್ರವೇಶಿಸುವ ಹೆಚ್ಚಿನ ಸರಕುಗಳ ಮೇಲೆ ೧೫ ಪ್ರತಿಶತ ಸುಂಕ ವಿಧಿಸುವ ಅಂಶ ಹೊಂದಿರುವ ಅಮೆರಿಕ ಹಾಗೂ ಐರೋಪ್ಯ ಒಕ್ಕೂಟ ನಡುವಿನ ಸಮಗ್ರ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲಾಗಿದೆ. ಈ ಕುರಿತಂತೆ ಅಂತಿಮ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಹಾಗೂ ಐರೋಪ್ಯ ಒಕ್ಕೂಟದ ಅಧ್ಯಕ್ಷೆ ಉರ್ಸುಲ್ಲಾ ವಾಂಡರ್ ಲೇಯನ್ ಘೋಷಿಸಿದ್ದಾರೆ.

<><><>

ಮ್ಯಾಂಚೆಸ್ಟರ್‌ನ ಓಲ್ಡ್ ಟ್ರ್ಯಾಫಾರ್ಡ್ ಕ್ರೀಡಾಂಗಣದಲ್ಲಿ ನಡೆದ ಆಂಡರ್ಸನ್ ತೆಂಡೂಲ್ಕರ್ ಟ್ರೋಫಿಯ ೪ನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಸಂಯಮ ಹಾಗೂ ಪ್ರತಿ ಹೋರಾಟದೊಂದಿಗೆ ಭಾರತ-ಇಂಗ್ಲೆಂಡ್‌ನೊಂದಿಗೆ ಡ್ರಾ ಸಾಧಿಸುವಲ್ಲಿ ಯಶಸ್ವಿಯಾಗಿದೆ. ತಮ್ಮ ೨ನೇ ಇನ್ನಿಂಗ್ಸ್‌ನಲ್ಲಿ ಭಾರತದ ಬ್ಯಾಟರ್‌ಗಳು ೫ ಅವಧಿಗೂ ಹೆಚ್ಚಿನ ಕಾಲ ಬ್ಯಾಟಿಂಗ್ ಮಾಡಿ, ೪ ವಿಕೆಟ್ ನಷ್ಟಕ್ಕೆ ೪೨೫ ರನ್ ಗಳಿಸಿದ್ದ ವೇಳೆ ಉಭಯ ತಂಡಗಳು ಡ್ರಾ ಮಾಡಿಕೊಳ್ಳಲು ಒಪ್ಪಿಕೊಂಡವು. ೨ನೇ ಇನ್ನಿಂಗ್ಸ್‌ನ ಆರಂಭದಲ್ಲಿ ಸೋಲಿನ ಭೀತಿಯಲ್ಲಿದ್ದ ಭಾರತೀಯ ತಂಡಕ್ಕೆ ಮೊದಲಿಗೆ ಕೆ.ಎಲ್. ರಾಹುಲ್ ಮತ್ತು ನಾಯಕ ಶುಭಮನ್ ಗಿಲ್ ಜೊತೆಯಾಟ, ನಂತರ ವಾಷಿಂಗ್‌ಟನ್ ಸುಂದರ್ ಹಾಗೂ ರವೀಂದ್ರ ಜಡೇಜ ಅವರ ಜೊತೆಯಾಟ ಆಸರೆಯಾಯಿತು. ಈ ಇನ್ನಿಂಗ್ಸ್‌ನಲ್ಲಿ ಶುಭಮನ್ ಗಿಲ್, ವಾಷಿಂಗ್ ಸುಂದರ್ ಹಾಗೂ ಜಡೇಜ ಶತಕ ಸಿಡಿಸಿದರು.

ವಾಷಿಂಗ್ ಸುಂದರ್ ಅವರ ಮೊದಲನೇ ಟೆಸ್ಟ್ ಶತಕ ಇದಾಗಿತ್ತು. ಸರಣಿಯ ಕೊನೆಯ ಪಂದ್ಯ ಇದೇ ಗುರುವಾರ ಓವಲ್ ಕ್ರೀಡಾಂಗಣದಲ್ಲಿ ನಡೆಯಲಿದೆ.

<><><><>

ಜಾರ್ಜಿಯಾದ ಬಟುಮಿಯಲ್ಲಿ ನಿನ್ನೆ ಸಂಜೆ ನಡೆದ ಫಿಡೆ ಮಹಿಳಾ ವಿಶ್ವಕಪ್-೨೦೨೫ ಫೈನಲ್‌ನ ಭಾರತದ ಕೊನೆರೊ ಹಂಪಿ ಮತ್ತು ದಿವ್ಯಾ ದೇಶಮುಖ್ ನಡುವಿನ ಎರಡನೇ ಸುತ್ತಿನ ಪಂದ್ಯವೂ ಡ್ರಾನಲ್ಲಿ ಅಂತ್ಯಗೊಂಡಿದೆ. ಈ ಹಿನ್ನಲೆ ಫಿಡೆ ಮಹಿಳಾ ವಿಶ್ವಕಪ್‌ನ ವಿಜೇತರನ್ನು ತೀರ್ಮಾನಿಸಲು ಇಂದು ನಡೆಯುವ ರ್‍ಯಾಪಿಡ್ ಮತ್ತು ಬ್ಲಿಟ್ಸ್ ಟೈ ಬ್ರೇಕರ್ ಪಂದ್ಯಗಳಲ್ಲಿ ಉಭಯ ಭಾರತೀಯ ಚೆಸ್ ಪಟುಗಳು ಮುಖಾಮುಖಿಯಾಗಲಿದ್ದಾರೆ. ಪಂದ್ಯ ಭಾರತೀಯ ಕಾಲಮಾನ ಅಪರಾಹ್ನ ೧.೩೫ಕ್ಕೆ ಆರಂಭವಾಗಲಿದೆ. ಟೈ ಬ್ರೇಕ್ ಪಂದ್ಯಗಳಲ್ಲಿ ತಲಾ ೧೦ ನಿಮಿಷಗಳ ೨ ರ್‍ಯಾಪಿಡ್ ಪಂದ್ಯಗಳು ನಡೆಯಲಿವೆ. ಆಗಲೂ ಸಮಬಲ ಮುಂದುವರೆದಲ್ಲಿ ೫ ನಿಮಿಷಗಳ ೨ ಪಂದ್ಯಗಳು ನಂತರ ೩ ನಿಮಿಷಗಳ ೨ ಬ್ಲಿಟ್ಸ್ ಪಂದ್ಯಗಳು ನಡೆಯಲಿವೆ. ಫೈನಲ್ ಪಂದ್ಯದಲ್ಲಿ ಗೆಲುವು ಸಾಧಿಸುವವರಿಗೆ ಮುಂದಿನ ವರ್ಷ ನಡೆಯುವ ಫಿಡೆ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸ್ಪರ್ಧಿಸಲು ಅವಕಾಶ ದೊರೆಯಲಿದೆ. ಈ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಗೆಲುವು ಸಾಧಿಸುವ ಆಟಗಾರ್ತಿ ವಿಶ್ವಚಾಂಪಿಯನ್‌ಶಿಪ್ ಪಟ್ಟ ಹೊಂದಿರುವ ಜು ವೆನ್ಯೂನ್ ವಿರುದ್ಧ ಸೆಣಸಾಟ ನಡೆಸಲು ಅವಕಾಶ ಪಡೆಯಲಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>